ಅಲ್ಲಿ ಗೋಡೆಯ ಬದಲಾಗಿ ಕನ್ನಡಿ ಇದೆಯೇನೋ ಅನ್ನುವ ಥರ ಅವಳು ಎಲ್ಲಿರಬಹುದು ಅಂತ ಕಲ್ಪನೆ ಮಾಡಿಕೊಳ್ಳುತ್ತಾ 'ನೀನು ಕಾಣುತ್ತೀ' ಅಂದೆ. ಅವಳು ಕಣ್ಣೆತ್ತಿ ನೋಡುತ್ತಾ ನಾನು ಅವಳ ಕಡೆಗೆ ಬೆನ್ನು ತಿರುಗಿಸಿ ಗೋಡೆಗೆ ಮುಖಮಾಡಿ ಕೂತಿರುವುದನ್ನು ಅವಳೆದುರಿಗಿದ್ದ ಕನ್ನಡಿಯ ಆಳದಲ್ಲಿ ಕಂಡಳು ಅನ್ನುವುದನ್ನು ನಾನು ಗೋಡೆಯ ಮೇಲೆ ಕಂಡೆ. ಅವಳು ಕಣ್ಣು ತಗ್ಗಿಸಿದ್ದು, ನೋಟ ಅವಳ ಬ್ರಾ ಮೇಲೆ ಇರುವುದು, ಅವಳು ಮಾತಾಡದೆ ಸುಮ್ಮನಿರುವುದು ಕಂಡೆ. 'ನೀನು ಕಾಣುತ್ತೀ,' ಅಂತ ಮತ್ತೆ ಅಂದೆ. ಬ್ರಾದ ಮೇಲಿದ್ದ ಕಣ್ಣು ಎತ್ತಿ ನೋಡಿದಳು. 'ಇಂಪಾಸಿಬಲ್,' ಅಂದಳು. ಯಾಕೆ ಅಂತ ಕೇಳಿದೆ. ಕಣ್ಣು ತಗ್ಗಿಸಿ ತಣ್ಣಗೆ ಮತ್ತೆ ಬ್ರಾ ನೋಡುತ್ತಾ, 'ಗೋಡೆ ಕಡೆಗೆ ಮುಖ ಮಾಡಿ ಕೂತಿದ್ದೀಯ,' ಅಂದಳು. ಆಗ ಕುರ್ಚಿ ತಿರುಗಿಸಿದೆ. ನನ್ನ ಬಾಯಲ್ಲಿ ಸಿಗರೇಟು ಕಚ್ಚಿಕೊಂಡಿದ್ದೆ. ನಾನು ಕನ್ನಡಿಗೆ ಮುಖ ಕೊಟ್ಟರುವಾಗ ಅವಳು ಮತ್ತೆ ದೀಪದ ಹತ್ತಿರ ವಾಪಸು ಹೋಗಿದ್ದಳು. ದೀಪದ ಕುಡಿಯ ಮೇಲೆ ಕೈ ಅಗಲ ಮಾಡಿ, ಅವಳ ಬೆರಳ ನೆರಳೇ ಮುಖಕ್ಕೆ ಮರೆಯಾಗಿದ್ದವು, ತನ್ನ ಎರಡೂ ರೆಕ್ಕೆ ತಾನೇ ಬಾಡಿಸಿಕೊಳ್ಳುತ್ತಿರುವ ಕೋಳಿಯ ಹಾಗಿದ್ದಳು. 'ನನಗೆ ಶೀತ ಆಗತ್ತೇನೋ. ಇದು ಐಸ್ ಸಿಟಿ ಇರಬೇಕು,' ಅಂದಳು ಮುಖ ಹೊರಳಿಸಿ ನೋಡಿಕೊಂಡಳು. ಅವಳ ಚರ್ಮ ತಾಮ್ರವರ್ಣದಿಂದ ಹೊರಳಿ ಕೆಂಪಾಗಿ ಮುಖದಲ್ಲಿ ತಟ್ಟನೆ ದುಃಖ ಕಂಡಿತ್ತು. 'ಏನಾದರೂ ಮಾಡು,' ಅಂದಳು, ಬ್ರಾದಿಂದ ಮೊದಲು ಮಾಡಿ ಒಂದೊಂದೇ ಬಟ್ಟೆ ಬಿಚ್ಚುವುದಕ್ಕೆ ಶುರು ಮಾಡಿದಳು. 'ಗೋಡೆ ಕಡೆ ತಿರುಗಿಕೊಳ್ತೇನೆ,' ಅಂದೆ. ಬೇಡ. ಹೇಗಿದ್ದರೂ ನೀನು ಬೆನ್ನು ತಿರುಗಿಸಿದ್ದಾಗ ನೋಡಿದ ಹಾಗೇ ನನ್ನ ನೋಡುತ್ತೀ,' ಅಂದಳು. ಅಷ್ಟು ಅನ್ನುವ ಹೊತ್ತಿಗೆ ಆಲ್ಮೋಸ್ಟ್ ಬರಿ ಮೈಯಾಗಿದ್ದಳು, ದೀಪದ ಬೆಳಕು ಅವಳ ತಾಮ್ರದ ಚರ್ಮವನ್ನು ನೆಕ್ಕುತ್ತಿತ್ತು. 'ನಿನ್ನ ಹೊಟ್ಟೆಯ ಚರ್ಮದ ಮೇಲೆ ಕುಳಿಗಳ ಥರ ಆಳವಾಗಿ ಗೆರೆ ಬಿದ್ದಿವೆಯಲ್ಲಾ, ಯಾರೋ ಹೊಡೆದ ಹಾಗೆ, ಅವನ್ನ ನೋಡಬೇಕು ಅಂತ ನನಗೆ ಯಾವಾಗಲೂ ಆಸೆ ಆಗತ್ತೆ.' ಅವಳ ಬತ್ತಲೆಯನ್ನು ನೋಡುತ್ತ ನನ್ನ ಮಾತು ಕದಡಿ ಹೋಗಿದ್ದವು ಅನ್ನುವುದು ನನಗೇ ಗೊತ್ತಾಗುವ ಮೊದಲೇ ಅವಳು ದೀಪದ ಗೋಳದ ಮೇಲೆ ಬಿಸಿ ಕಾಯಿಸಿಕೊಳ್ಳುತ್ತ ನಿಶ್ಚಲವಾಗಿದ್ದಳು- 'ನನ್ನನ್ನ ಲೋಹದಲ್ಲಿ ಮಾಡಿದ್ದಾರೆ ಅಂತ ಅವಾಗವಾಗ ಅನಿಸತ್ತೆ,' ಅಂದಳು. ಒಂದು ಕ್ಷಣ ಮೌನವಾದಳು. ದೀಪದ ಕುಡಿಯ ಮೇಲಿದ್ದ ಅವಳ ಕೈ ಒಂದಿಷ್ಟೇ ಸರಿದಿತ್ತು. 'ನೀನು ಯಾವುದೋ ಮ್ಯೂಸಿಯಮ್‌ನ ಮೂಲೆಯಲ್ಲಿರುವ ಕಂಚಿನ ವಿಗ್ರಹ ಅಷ್ಟೇ ಅಂತ ಬೇರೆ ಕನಸಲ್ಲಿ ನಾನು ಅಂದುಕೊಳ್ಳತಾ ಇದ್ದೆ. ಅದಕ್ಕೇ ನಿನಗೆ ಚಳಿ ಆಗಿರಬೇಕು,' ಅಂದೆ. ಅದಕ್ಕೆ ಅವಳು, 'ಒಂದೊಂದು ಸಲ ನನ್ನ ಬಗ್ಗೇನೇ ತುಂಬ ಯೋಚನೆ ಮಾಡಿದಾಗ ಮೈಯೆಲ್ಲ ಟೊಳ್ಳಾದ ಹಾಗೆ ಅನಿಸತ್ತೆ, ಮೈ ಚರ್ಮ ಪ್ಲೇಟ್ ಥರಾ ಅನಿಸತ್ತೆ, ಮೈಯೊಳಗೆ ರಕ್ತ ಪಂಪ್ ಆಗೋವಾಗ ಯಾರೋ ಹೊಟ್ಟೆ ಮೇಲೆ ಬಡಿಯುತ್ತಾ ನನ್ನ ಕರೀತಾ ಇದಾರೇನೋ ಅನಿಸತ್ತೆ. ಹಾಸಿಗೆ ಮೇಲೆ ಇರೋವಾಗಲೇ ನನ್ನ ತಾಮ್ರದ ತಗಡಿನ ಸದ್ದು ಫೀಲ್ ಮಾಡತಿದ್ದೆ. ನಾನು ತಾಮ್ರದ ತಟ್ಟೆ ಥರ- ಹೊಳೆಯುವ ತಾಮ್ರದ ತಗಡು ಅಂತ ನೀವು ಅನ್ನುತ್ತೀರಲ್ಲ- ಆ ಥರಾ ಸೌಂಡು ಮಾಡತಾ ಇದೀನಿ ಅನಿಸ್ತಾ ಇತ್ತು,' ಅಂದಳು. ದೀಪಕ್ಕೆ ಇನ್ನೂ ಹತ್ತಿರ ಹೋದಳು, 'ನೀನು ಮಾಡೋ ಆ ಶಬ್ದ ನಾನು ಕೇಳಬೇಕಾಗಿತ್ತು,' ಅಂದೆ. ಅದಕ್ಕೆ ಅವಳು, 'ಯಾವಾಗಾದರೂ ನಾವು ಮೀಟ್ ಆದರೆ, ನಾನು ಎಡಗಡೆಗೆ ಹೊರಳಿ ಮಲಗಿರತೀನಲ್ಲಾ ಆವಾಗ ನನ್ನ ಪಕ್ಕೆಯ ಮೇಲೆ ಕಿವಿ ಇಟ್ಟು ಕೇಳು, ನನ್ನೊಳಗಿನ ಪ್ರತಿಧ್ವನಿ ಕೇಳತ್ತೆ, ನೀನು ಒಂದು ಸಲವಾದರೂ ಹಾಗೆ ಕೇಳಬೇಕು ಅಂತ ಆಸೆ ನನಗೆ,' ಅಂದಳು. ಅವಳು ಮಾತಾಡುವಾಗ ಕಷ್ಟಪಡತಾ ಉಸಿರು ಬಿಡತಾ ಇರೋದು ಕೇಳಿಸಿತು. 'ನೀಲಿ ನಾಯೀ ಕಣ್ಣು' ಅನ್ನುವ ಗುರುತಿನ ಮಾತೊಂದನ್ನೇ ಹಿಡಿದುಕೊಂಡು ನನ್ನನ್ನು ನಿಜದಲ್ಲಿ ಕಾಣುವುದಕ್ಕೇ ಇಡೀ ಬದುಕು ಮೀಸಲಾಗಿಟ್ಟದಾಳೆ. ಅವಳನ್ನು ಅರ್ಥಮಾಡಿಕೊಳ್ಳುವ ಏಕೈಕ ವ್ಯಕ್ತಿಗೆ- 'ದಿನಾ ನಿನ್ನ ಕನಸಿನಲ್ಲಿ ಬಂದು 'ನೀಲಿ ನಾಯೀ ಕಣ್ಣು' ಅನ್ನೋಳು ನಾನೇನೇ,' ಅನ್ನುವುದನ್ನ ತಿಳಿಸುವವಳ ಹಾಗೆ ಬೀದಿಯಲ್ಲಿ ಆಡ್ಡಾಡುವಾಗಲೂ ನೀಲಿ ನಾಯೀ ಕಣ್ಣೂ ಅಂತ ಗಟ್ಟಿಯಾಗಿ ಹೇಳುತ್ತಾ ಓಡಾಡುತಿದ್ದಳು. 'ನೀಲಿ ನಾಯೀ ಕಣ್ಣು' ಅನ್ನುವ ಗುರುತಿನ ಮಾತೊಂದನ್ನೇ ಹಿಡಿದುಕೊಂಡು ನನ್ನನ್ನು ನಿಜದಲ್ಲಿ ಕಾಣುವುದಕ್ಕೇ ಅವಳ ಇಡೀ ಬದುಕು ಮೀಸಲಾಗಿತ್ತು, 'ದಿನಾ ನಿನ್ನ ಕನಸಿನಲ್ಲಿ ಬಂದು,